ದಿನಾಂಕಃ 29-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ

ನಾನು ಈ ದಾವೆಯಲ್ಲಿ ಸೇರಿಸಿರುವ ಆಸ್ತಿ ಅರಣ್ಯ ಇಲಾಖೆಗೆ ಸೇರಿದ ಸರ್ವೆ ನಂ 37 ರ 1 ಭಾಗ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಮೂದಿಸಿರುವ ಚೆಕ್ಕುಬಂದಿಯಲ್ಲಿನ ಆಸ್ತಿಗೂ ಹಾಗೂ ದಾವಾಸ್ತಿಯಲ್ಲಿ ನಮೂದಿಸಿರುವ ಸರ್ವೆ ನಂ 76/8 ಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಚೆಕ್ಕುಬಂದಿಯಲ್ಲಿರುವ ಆಸ್ತಿಗೆ ಎಂದಿಗೂ ಅನುಭವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಸರ್ಕಾರಕ್ಕೆ ಸೇರಿದ ಆಸ್ತಿಯಲ್ಲಿ ವಲಯ ಅರಣ್ಯಾಧಿಕಾರಿಗಳ ಒಪ್ಪಿಗೆ ಮೇರೆಗೆ ಪ್ರತಿವಾದಿಗಳು ದಾವಾ ಚೆಕ್ಕುಬಂದಿಯ ಆಸ್ತಿಯಲ್ಲಿ ಆರ್ ಸಿ ಸಿ ಕಟ್ಟಡವನ್ನು ನಿರ್ಮಾಣ ಮಾಡಿಕೊಂಡು ಅದರಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

ನಾನು ಹಿಸ್ಸಾ ಪತ್ರ ಮಾಡಿಕೊಳ್ಳುವ ಸಮಯಕ್ಕೆ ಪಶ್ಚಿಮದ ಚೆಕ್ಕುಬಂದಿಯನ್ನು ಸರ್ವೆ ನಂ 37 ರ ಅರಣ್ಯ ಇಲಾಖೆಯ ಜಮೀನು ಎಂದು ತೋರಿಸುವುದರ ಬದಲಾಗಿ ರಸ್ತೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ 76/8 ರ ನಮ್ಮ ಆಸ್ತಿಯ ಪಶ್ಚಿಮಕ್ಕೆ ತಂತಿಬೇಲಿಯನ್ನು ಹಾಕಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿಪಿ-2 ರ ಪಾಲುವಿಭಾಗಪತ್ರದ 3 ನೇ ಷೆಡ್ಯೂಲ್‌ನಲ್ಲಿ ಪಶ್ಚಿಮದ ಚೆಕ್ಕುಬಂದಿಯನ್ನು ತಪ್ಪಾಗಿ ನಮೂದಿಸಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ದಾವಾಸ್ತಿಯಲ್ಲಿ ನಮೂದಿಸಿರುವ ಚೆಕ್ಕುಬಂದಿಯಲ್ಲಿನ ಆಸ್ತಿಗೂ ವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಪ್ರತಿವಾದಿ ಮತ್ತು ಆತನ ತಂಗಿ ಸೇರಿಕೊಂಡು ದಾವಾಸ್ತಿಯ ಚೆಕ್ಕುಬಂದಿಯಲ್ಲಿ ನಿರ್ಮಾಣ ಮಾಡಿರುವ ಮನೆಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಾಗ ನಮ್ಮದೆ ಎಂದು ನುಡಿಯುತ್ತಾರೆ. ಸದರಿ ಜಾಗಕ್ಕೂ ಮತ್ತು ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸ್ಥಳದ ಯಥಾ ಸ್ಥಿತಿಯಂತೆ ಗ್ರಾಮ ನಕ್ಷೆ ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.

ದಿನಾಂಕಃ 29-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ

ನಾನು ಈ ಹಿಂದಿನ ದಿನಾಂಕದಲ್ಲಿ ನೀಡಿದಸಾಕ್ಷ್ಯ ನನಗೆ ನೆನಪಿದೆ. ಅದರಂತೆ ನಾನು ನಮ್ಮ ಆಸ್ತಿಯ ಪಶ್ಚಿಮಕ್ಕೆ ತಂತಿಬೇಲಿ ಇದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನಾನು ಆ ರೀತಿಯ ಹೇಳಿಕೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ ಸಾಕ್ಷಿ ಮುಂದುವರೆದು ದಾರಿ ಇದೆ ಎಂದು ನುಡಿಯುತ್ತಾರೆ. ನನ್ನ ಅಣ್ಣನ ಮನೆಯ ಪಶ್ಚಿಮ ಭಾಗಕ್ಕೆ ಖಾಲಿ ಜಾಗ ಇದ್ದು ಅದರ ಪಶ್ಚಿಮಕ್ಕೆ ತಂತಿಬೇಲಿಯನ್ನು ನಾನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ತಂತಿಬೇಲಿಯಿಂದ ಪಶ್ಚಿಮಕ್ಕೆ ಇರುವ ಜಾಗವೇ ಪ್ರಸ್ತುತ ದಾವೆಯ ವಿವಾದಿತ ಜಾಗ ಎಂದರೆ ಸರಿ. ಸದರಿ ವಿವಾದಿತ ಜಾಗದ ಪಶ್ಚಿಮಕ್ಕೆ ಮಲ್ಲಿಗೆರೆ ರಸ್ತೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ರಸ್ತೆ ಚನ್ನಗಿರಿಯಿಂದ ಮಲ್ಲಿಗೆರೆಗೆಹೋಗುತ್ತದೆ ಎಂದು ನುಡಿಯುತ್ತಾರೆ.

ಸದರಿ ತಂತಿಬೇಲಿಗೂ ರಸ್ತೆಗೂ ನಡುವೆ ಪೂರ್ವ-ಪಶ್ಚಿಮವಾಗಿ ಸುಮಾರು 40 ಅಡಿ ಜಾಗವಿದೆ. ಈ ದಾವೆ ಹೂಡುವ ಪೂರ್ವ ಸದರಿ 40 ಅಡಿ ಜಾಗ ಸರ್ವೆ ನಂ 76/8 ಕ್ಕೆ ಸೇರಿದ ಕುರಿತು ಯಾವುದೇ ಅಳತೆ ಕಾರ್ಯವನ್ನು ಮಾಡಿರುವುದಿಲ್ಲ. ಸದರಿ 76/8 ರಲ್ಲಿ 3 ಗುಂಟೆ ಜಾಗವಿದ್ದು ಅದರಲ್ಲಿ ಮನೆಯನ್ನು ಎಷ್ಟು ವಿಸ್ತೀರ್ಣದಲ್ಲಿ ಕಟ್ಟಲಾಗಿದೆ ಮತ್ತು ಎಷ್ಟು ವಿಸ್ತೀರ್ಣದ ಜಾಗ ಖಾಲಿ ಇದೆ ಎಂದು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿ. ಈ ದಾವೆ ಹೂಡಿದ ತರುವಾಯ ತಾತ್ಕಾಲಿಕ ನಿರ್ಬಂದಕಾಜ್ಞೆಯ ಆದೇಶವನ್ನು ಈ ನ್ಯಾಯಾಲಯ ತಿರಸ್ಕರಿಸಿದ ಕಾರಣ ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಚನ್ನಗಿರಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯ ವಜಾ ಆದ ತರುವಾಯ ನಾನು ಯಾವುದೇ 2 ನೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ನಾನು ಈ ದಾವೆ ಹೂಡಿದ ತರುವಾಯ ಪ್ರತಿವಾದಿಗಳು ವಿವಾದಿತ ಜಾಗದಲ್ಲಿ ಮನೆ ಕಟ್ಟಡವನ್ನು ಕಟ್ಟುತ್ತಿದ್ದಾರೆ ಎಂದು ಚನ್ನಗಿರಿಯ ಪೊಲೀಸ್ ಠಾಣೆಯಲ್ಲಿಯೂ ಸಹ ಪ್ರತಿವಾದಿಗಳ ವಿರುದ್ಧ ದೂರು ದಾಖಲಿಸಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿವಾದಿತ ಜಾಗದಲ್ಲಿ ನಾನು ಮನೆ ಕಟ್ಟುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ನನ್ನ ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಿವಾದಿತ ಜಾಗದಲ್ಲಿ ನಾನು ನನ್ನ ವಾಸದ ಮನೆ ಕಟ್ಟುತ್ತಿದ್ದ ಬಗ್ಗೆ ಬರೆಸಿರುತ್ತೇನೆ. ಸಾಕ್ಷಿಗೆ ಈಗ ತನ್ನಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ತೋರಿಸಲಾಗಿ ಸದರಿ ಪ್ರಮಾಣ ಪತ್ರದಲ್ಲಿ ವಾಸದ ಮನೆಯನ್ನು ವಿವಾದಿತ ಜಾಗದಲ್ಲಿ ಕಟ್ಟುತ್ತಿದ್ದೇವೆ ಎಂಬ ಬಗ್ಗೆ ಉಲ್ಲೇಖವಿದೆಯೇ ಎಂದರೆ ಸಾಕ್ಷಿ ಖೇಣಿ ಮನೆಯನ್ನು ವಾಸದ ಮನೆಯಾಗಿ ಮಾಡಿಕೊಂಡೆವು ಎಂದು ನುಡಿಯುತ್ತಾರೆ.

ಸದರಿ ಕಲ್ಲಿನ ಕಂಬಗಳ ಮೇಲೆ ಖೇಣಿ ಮನೆಯನ್ನು ಕಟ್ಟಲು ಹೋದಾಗ ಪ್ರತಿವಾದಿಗಳು ತಕರಾರು ತೆಗೆದರು ಎಂದು ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ವಿವಾದಿತ ಜಾಗದಲ್ಲಿ ಖೇಣಿ ಮನೆಯನ್ನು ಕಟ್ಟುತ್ತಿದ್ದ ಬಗ್ಗೆ ಪೊಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಖೇಣಿ ಮನೆಯನ್ನು ಕಟ್ಟಲು ನಾನು ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಪರವಾನಿಗೆ ತೆಗೆದುಕೊಂಡಿರುವುದಿಲ್ಲ. ಸದರಿ ವಿವಾದಿತ ಜಾಗದಲ್ಲಿ ಖೇಣಿ ಮನೆಯ ಬದಲಾಗಿ ವಾಸದ ಮನೆಯನ್ನು ಕಟ್ಟುತ್ತಿದ್ದ ಬಗ್ಗೆ ನನ್ನ ವಾದಪತ್ರದಲ್ಲಿ ಯಾವುದೇ ತಿದ್ದುಪಡಿಯನ್ನು ಮಾಡಿರುವುದಿಲ್ಲ.

ಸಾಕ್ಷಿಗೆ ಈಗ ಒಂದು ಪೊಟೋವನ್ನು ತೋರಿಸಲಾಗಿ ಸದರಿ ಪೊಟೋದಲ್ಲಿ ಇರುವ ಖಾಲಿ ಜಾಗವೇ ದಾವೆ ದಾಖಲಿಸುವ ಮುಂಚೆ ಇದ್ದಂತಹ ವಿವಾದಿತ ಜಾಗ ಎಂದರೆ ಸರಿ. ಸಾಕ್ಷಿ ತದರಿ ಪೊಟೋವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿಡಿ-**2** ಎಂದು ಗುರುತಿಸಲಾಯಿತು. ಸದರಿ ನಿಡಿ-2 ರಲ್ಲಿ ಇರುವ ಹೆಣ್ಣುಮಗಳೇ ಪ್ರತಿವಾದಿಯ ಅಕ್ಕ ಎಂದರೆ ಸಾಕ್ಷಿ ಪ್ರೇಮ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಒಂದು ಇನ್ನೊಂದು ಪೊಟೋವನ್ನು ತೋರಿಸಲಾಗಿ ಸದರಿ ಪೊಟೋದಲ್ಲಿ ಕಾಣಿಸುತ್ತಿರುವ ವಸ್ತು ಸ್ಥಿತಿಯೇ ದಾವಾ ವಿವಾದಿತ ಆಸ್ತಿ ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಮತ್ತೊಂದು ಪೊಟೋವನ್ನು ತೋರಿಸಲಾಗಿ ಸದರಿ ಪೊಟೋದಲ್ಲಿ ಇರುವ ಕಟ್ಟಡವೇ ವಿವಾದಿತ ಜಾಗದಲ್ಲಿ ನಿರ್ಮಿಸಿರುವ ಕಟ್ಟಡ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮದೇ ಎಂದು ನುಡಿಯುತ್ತಾರೆ. ಸದರಿ ಕಟ್ಟಡದ ನಿರ್ಮಾಣ ಕಾರ್ಯ ಸಂಪೂರ್ಣ ಮುಗಿದಿದೆ ಎಂದರೆ ಸರಿ.ಸಾಕ್ಷಿ ಸದರಿ ಪೊಟೋವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿಡಿ-**3** ಎಂದು ಗುರುತಿಸಲಾಯಿತು.ಸದರಿ ಮುಗಿದಿರುವ ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನು ಅಳವಡಿಸಲಾಗಿದೆ ಎಂದರೆ ಸರಿ. ಸದರಿ ವಿದ್ಯುತ್ ಸಂಪರ್ಕ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಮುಗಿದಿರುವ ಕಟ್ಟಡದಲ್ಲಿ ಯಾರು ವಾಸವಾಗಿರುವುದಿಲ್ಲ.

ಸಾಕ್ಷಿಗೆ ಈಗ ಮತ್ತೊಂದು ಪೊಟೋವನ್ನು ತೋರಿಸಲಾಗಿ ಸದರಿ ಪೊಟೋದಲ್ಲಿ ಇರುವ ಕಾಣಿಸುತ್ತಿರುವ ಕಟ್ಟಡವೇ ವಿವಾದಿತ ಸ್ಥಳದಲ್ಲಿ ನಿರ್ಮಿಸಿ ಮುಗಿಸಿರುವ ಕಟ್ಟಡ ಎಂದರೆ ಸರಿ. ಸಾಕ್ಷಿ ಸದರಿ ಪೊಟೋವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿಡಿ-**4** ಎಂದು ಗುರುತಿಸಲಾಯಿತು. ಸದರಿ ಕಟ್ಟಡದ ಮುಂದಿನ ಬಾಗಿಲಿನಲ್ಲಿ ನಿಂತಿರುವ ಜನರೇ ಪ್ರತಿವಾದಿ ಮತ್ತು ಆತನ ಕುಟುಂಬದವರು ಎಂದರೆ ಸರಿ.

ಸದರಿ ಪ್ರತಿವಾದಿಗೆ ವಿವಾದಿತ ಜಾಗದಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ವಾಸಿಸಲು ಯಾವುದೇ ರೀತಿಯ ಪರವಾನಿಗೆಯನ್ನು ಕೊಟ್ಟಿರುವುದಿಲ್ಲ. ಸಾಕ್ಷಿಗೆ ಈಗ ಮತ್ತೊಂದು ಪೊಟೋವನ್ನು ತೋರಿಸಲಾಗಿ ಸದರಿ ಪೊಟೋದಲ್ಲಿ ಇರುವ ಕಾಣಿಸುತ್ತಿರುವ ಚಿತ್ರ ಸದರಿ ಕಟ್ಟಡದ ಮುಂದಿನ ಭಾಗದ ಭಾವಚಿತ್ರ ಎಂದರೆ ಸರಿಯಲ್ಲ. ಸದರಿ ಕಟ್ಟಡದಲ್ಲಿ ನಮ್ಮ ಕುಟುಂಬದವರು ಯಾರು

ವಾಸವಾಗಿರುವುದಿಲ್ಲ. ಸದರಿ ಕಟ್ಟಡದ ಗೃಹ ಪ್ರವೇಶ ಮುಗಿದಿದೆ ಎಂದರೆ ಸರಿಯಲ್ಲ. ಸದರಿ ಭಾವಚಿತ್ರದಲ್ಲಿ ಕಾಣಿಸುತ್ತಿರುವ ಜನರು ಪ್ರತಿವಾದಿ ಮತ್ತು ಪ್ರತಿವಾದಿಯ ಕುಟುಂಬದವರು ಎಂದರೆ ಸರಿ. ಸಾಕ್ಷಿ ಸದರಿ ಫೋಟೋದಲ್ಲಿನ ಜನರನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿಡಿ**-5** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ಫೋಟೋವನ್ನು ತೋರಿಸಲಾಗಿ ಸದರಿ ಫೋಟೋದಲ್ಲಿ ಇರುವ ಕಾಣಿಸುತ್ತಿರುವ ಜನರೇ ಪ್ರತಿವಾದಿ ಮತ್ತು ಪ್ರತಿವಾದಿಯ ಕುಟುಂಬಸ್ಥರು ಎಂದರೆ ಸರಿ. ಸಾಕ್ಷಿ ಸದರಿ ಫೋಟೋವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿಡಿ**-6** ಎಂದು ಗುರುತಿಸಲಾಯಿತು. ಸದರಿ ನಿಡಿ-5 ಮತ್ತು 6 ರಲ್ಲಿ ಕಾಣಿಸುತ್ತಿರುವ ಕಟ್ಟಡವೇ ವಿವಾದಿತ ಜಾಗದಲ್ಲಿ ನಿರ್ಮಾಣವಾಗಿರುವ ಕಟ್ಟಡ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಾಗ ನಮ್ಮದೇ ಎಂದು ನುಡಿಯುತ್ತಾರೆ. ನಮ್ಮಜಾಗದಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಲು ಪ್ರತಿವಾದಿಗೆ ನಾನು ಎಂದಿಗೂ ಅನುಮತಿಯನ್ನು ನೀಡಿರುವುದಿಲ್ಲ.

ಸದರಿ ಕಟ್ಟಡದ ಲಗತ್ತಾಗಿ ಉತ್ತರ ದಿಕ್ಕಿಗೆ ದೇವಸ್ಥಾನ ಬರುತ್ತದೆ. ಸದರಿ ದೇವಸ್ಥಾನ ಮತ್ತು ಕಟ್ಟಡಕ್ಕೂ ನಡುವೆ 15 ಅಡಿ ರಸ್ತೆ ಇದೆ. ಸದರಿ ಕಟ್ಟಡದ ಉತ್ತರ ದಿಕ್ಕಿಗೆ ಶುದ್ಧ ನೀರಿನ ಘಟಕ ಬರುತ್ತದೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಲಾಗಿ ಸದರಿ ಫೋಟೋದಲ್ಲಿ ಇರುವ ಕಾಣಿಸುತ್ತಿರುವ ನೀಲಿ ಬಣ್ಣದ ಘಟಕವೇ ಸದರಿ ಶುದ್ಧ ನೀರಿನ ಘಟಕ ಎಂದರೆ ಸರಿ. ಸಾಕ್ಷಿ ಸದರಿ ಫೋಟೋವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು ನಿಡಿ**-7** ಎಂದು ಗುರುತಿಸಲಾಯಿತು.

ಪ್ರೇಮಮ್ಮನವರು ಒಂದು ಶೆಡ್ ಹಾಕಿಕೊಂಡು ಅಂಗಡಿ ನಡೆಸುತ್ತಿದ್ದಾರೆ ಎಂದು ನನ್ನ ದಾವಾಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. (ಸದರಿ ಸಮಯಕ್ಕೆ ವಾದಿ ಪರ ವಕೀಲರು ಪಾಟೀ ಸವಾಲಿಗೆ ತಕರಾರು ತೆಗೆದಿರುತ್ತಾರೆ.)

ಸಾಕ್ಷಿ ಮುಂದುವರೆದು ಸದರಿ ಜಾಗವನ್ನು 10 ವರ್ಷಗಳ ಹಿಂದೆ ನಾವೇ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಶೆಡ್ ವಿವಾದಿತ ಕಟ್ಟಡದ ಉತ್ತರ ದಿಕ್ಕಿಗೆ ಬರುತ್ತದೆ. ನೀರಿನ ಘಟಕ, ಶೆಡ್ ಮತ್ತು ನಿರ್ಮಿಸಿರುವ ಕಟ್ಟಡ ಎಲ್ಲಾ ಆಸ್ತಿಗಳು ಸಹ ಸರ್ವೆ ನಂ 76/8 ರ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಸರ್ವೆ ನಂ 76/8 ರ ಪಶ್ಚಿಮಕ್ಕೆ ಇರುವ ಜಾಗ ಸರ್ವೆ ನಂ 37 ರ ಅರಣ್ಯ ಇಲಾಖೆಗೆ ಸೇರಿದ ಜಾಗ ಎಂದರೆ ಸರಿಯಲ್ಲ. (ಸದರಿ ಸಮಯಕ್ಕೆ ವಾದಿ ಪರ ವಕೀಲರು ಪಾಟೀ ಸವಾಲಿಗೆ ತಕರಾರು ತೆಗೆದಿರುತ್ತಾರೆ.)

ಸಾಕ್ಷಿ ಮುಂದುವರೆದು ಸರ್ವೆ ನಂ 37/2 ಇದ್ದುದ್ದು ಸರ್ವೆ ನಂ 76 ಅಗಿದೆ ಎಂದು ನುಡಿಯುತ್ತಾರೆ. ಸದರಿ ನಿರ್ಮಿಸಿದ ಕಟ್ಟಡ ಸರ್ವೆ ನಂ 76/8 ರಲ್ಲಿ ಬರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಶುದ್ಧ ನೀರಿನ ಘಟಕವನ್ನು ಪಂಚಾಯತಿಯವರು ನಿರ್ಮಿಸಿರುತ್ತಾರೆ. ಸದರಿ ಜಾಗವನ್ನು ನಾವೇ ಕೊಟ್ಟಿರುತ್ತೇವೆ. ಸದರಿ ಜಾಗವನ್ನು ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ. (ಸದರಿ ಸಮಯಕ್ಕೆ ವಾದಿ ಪರ ವಕೀಲರು ಪಾಟೀ ಸವಾಲಿಗೆ ತಕರಾರು ತೆಗೆದಿರುತ್ತಾರೆ.)

ಸಾಕ್ಷಿ ಮುಂದುವರೆದು ಮಾನವೀಯತೆ ದೃಷ್ಟಿಯಿಂದ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಸದರಿ ಶುದ್ಧ ನೀರಿನ ಘಟಕಕ್ಕೆ ಜಾಗವನ್ನು ಪಂಚಾಯತಿಯವರಿಗೆ ಸುಮಾರು 10 ವರ್ಷಗಳ ಹಿಂದೆ ಕಕೊಟ್ಟಿರುತ್ತೇವೆ ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. ನಿಡಿ-5 ಮತ್ತು 6 ರಲ್ಲಿ ಕಾಣಿಸುತ್ತಿರುವ ಕಟ್ಟಡದ ವಿದ್ಯುತ್ ಸಂಪರ್ಕ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ವಿದ್ಯುತ್ ಸಂಪರ್ಕ ವಾದಿ ಪರ್ವತಪ್ಪನ ಹೆಸರಿನಲ್ಲಿ ಇಲ್ಲ ಎಂದರೆ ಸಾಕ್ಷಿ ಯಾರ ಹೆಸರಿನಲ್ಲೂ ಇಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ಪ್ರತಿವಾದಿಯ ಹೆಸರಿನಲ್ಲಿರುವ ವಿದ್ಯುತ್ ಸಂಪರ್ಕ ಅನಧಿಕೃತವೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ವಾದಿ ಅನಧೀಕೃತವಾಗಿ ಎಂದಿಗೂ ವಿದ್ಯುತ್ ಸಂಪರ್ಕವನ್ನು ಪಡೆದಿರುವುದಿಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

(ನ್ಯಾಯಾಲಯ ಗಮನಿಸಿದಂತೆ ಸಾಕ್ಷ್ಯ ಪೆಟ್ಟಿಗೆಯಲ್ಲಿ ನಿಂತಿರುವ ಫ್ರಾಸಾ 1 ರವರು ಪ್ರತಿವಾದಿ ಪರ ವಕೀಲರು ಕೇಳಿದ ಪ್ರತಿ ಪ್ರಶ್ನೆಗೂ ಸಹ ಅವರ ಸಮಕ್ಷಮ ಕುಳಿತಿದ್ದ ವಾದಿ ಪರ ವಕೀಲರ ಮುಖವನ್ನು ನೋಡುತ್ತಲೇ ಉತ್ತರಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.